ಪ್ರಶ್ನೆಗೆ ಒಟ್ಟಾರೆ ಅವಶ್ಯಕತೆಯಂತೆ ನೇಮಕ ಮಾಡಲಾಗುವುದೆಂದು ತಿಳಿಸಿದ್ದೀರಿ. ಈಗಿನ ಅವಶ್ಯಕತೆಯಂತೆ ನೇಮಕ ಮಾಡಲಾಗುವುದೇ? ಉಪಾಧ್ಯಾಯರ ಮತ್ತು ಪುಕ್ಕಳೆ ದಾಮಾಷಾ ಪ್ರಕಾರ ಅಂದರೆ 1:50ರ ಪ್ರಕಾರ ನೇಮಕ ಮಾಡುತ್ತೀರಾ, 2 ವರ್ಷಗಳ ಹಿಂದಿನ ಕೊರತೆ 150 ಇತ್ತು, ಈಗ 1000ಕ್ಕೆ ಹತ್ತಿರ ಬಂದಿದೆ. ನೀವು ಯಾವ ಆಧಾರದ ಮೇಲೆ ನೇಮಕ ಮಾಡುತ್ತೀರಿ ?

ಅಧ್ಯಕ್ಷರು.—ನೀವು ಭಾಷಣ ಮಾಡುತ್ತೀರಾ, ಅಥವಾ ಪ್ರಶ್ನೆ ಕೇಳುತ್ತೀರಾ.

ಶ್ರೀ ಜಿ.ಎಸ್. ಆಚಾರ್.—ನಾನು ಪ್ರಶ್ನೆ ಕೇಳುತ್ತಿದ್ದೇನೆ. ಒಟ್ಟಾರೆ ಅವಶ್ಯಕತೆಗೆ ಬೇಕಾದ ಹುದ್ದೆಯನ್ನು ಯಾವಾಗ ಮಂಜೂರು ಮಾಡಲಾಗುತ್ತದೆಂಬುದನ್ನು ತಿಳಿಸಿ.

ಶ್ರೀ ಎಂ. ಚಂದ್ರಶೇಖರ್.—ಪ್ರಥಮ ದರ್ಜೆ ಕಾಲೇಜಿನಲ್ಲಿ ಸುಮಾರು 1872 ಉಪನ್ಯಾಸಕರ ಹುದ್ದೆಗಳು ಖಾಲಿ ಇದ್ದು, ಅದರಲ್ಲಿ 586 ರೀಡರ್ ಹುದ್ದೆಗಳಿಗೆ ಬಡ್ತಿ ಕೊಟ್ಟಿರುವ ಕಾರಣ ಆ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸುಮಾರು 123 ಹುದ್ದೆಗೆ ನೇರವಾಗಿ ರೀಡರ್ ಆಗಿ ನೇಮಕ ಮಾಡಲಾಗಿದೆ. 1409 ಹುದ್ದೆಗಳಲ್ಲಿ ಹಾಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ. ಖಾಯಂ ಮಾಡುವುದಕ್ಕೆ ವಿಳಂಬವಾಗಿರಬಹುದು. ಒಟ್ಟು 1872 ಹುದ್ದೆಗಳಲ್ಲಿ 1400 ಹುದ್ದೆಗಳನ್ನು ಈಗ ತುಂಬಿದೆ. ಉಳಿದ ಹುದ್ದೆಗಳನ್ನು ಈಗ ತುಂಬಿದೆ. ಉಳಿದ ಹುದ್ದೆಗಳನ್ನು ತುಂಬಲಿಕ್ಕೆ ಕ್ರಮ ತೆಗೆದುಕೊಳ್ಳಲಾಗಿದೆ. ಪ್ರಾಥಮಿಕ ಶಾಲೆಗಳಿಗೆ ಸಂಬಂಧಪಟ್ಟಹಾಗೆ ಮಾನ್ಯ ಸದಸ್ಯರು ಹೇಳಿರುವುದು ನಿಜ. ಶಿಕ್ಷಕರ ನೇಮಕಾತಿಗೆ ಆಜ್ಞೆಯನ್ನು ಹೊರಡಿಸಲಾಗಿತ್ತು, ಈ ಮಧ್ಯೆ ಸರ್ಕಾರದ ಮುಂದೆ ಒಂದು ಪ್ರಶ್ನೆ ಬಂತು. ಟಿ.ಸಿ.ಹೆಚ್. ಮಾಡಿದಂತಹ ವಿದ್ಯಾರ್ಥಿಗಳು 1983ರ ಆಜ್ಞೆಯ ಪ್ರಕಾರ ಅವರ ವಯಸ್ಸನ್ನು ಹೆಚ್ಚಿದರೂ ಕೂಡ ನೇಮಕ ಮಾಡುವುದಕ್ಕೆ ಅವಕಾಶ ಇತ್ತು. ಈಗಿನ ಆಜ್ಞೆಯಲ್ಲಿ ಅದನ್ನು ತೆಗೆದುಹಾಕಲಾಗಿದೆ. ಅದರ ಬಗ್ಗೆ ಪ್ರತಿಭಟನೆ ಮತ್ತು ಒತ್ತಡಗಳು ಬಂದಕಾರಣ ಸರ್ಕಾರ ಪರಿಶೀಲನೆ ಮಾಡಿ ಇವತ್ತು ಟಿ.ಸಿ.ಹೆಚ್. ಮಾಡಿದ್ದು ವಯಸ್ಸಾದವರಿಗೂ ಕೂಡ ಶೇಕಡ 50ರಷ್ಟು ಹುದ್ದೆಗಳನ್ನು ಕಾಯ್ದಿರಿಸಿ ಉಳಿದ 50ರಷ್ಟು ಹುದ್ದೆಗಳನ್ನು ನೇಮಕ ಮಾಡಲು ಈಗಾಗಲೇ ಜಿಲ್ಲಾ ಮಟ್ಟದ ಸಮಿತಿಯವರು ಅರ್ಜಿಗಳನ್ನು ಕರೆದಿದ್ದಾರೆ. ಈ ಬಗ್ಗೆ ಆಜ್ಞೆ ಕೂಡ ಸರ್ಕಾರದಿಂದ ಹೋಗಿದೆ.

ಗಂಗಾವಳಿ ಮತ್ತು ಅಘನಾಶಿನಿ ನದಿಗಳಿಗೆ ಮಿನಿ ಎಲ್. ಸಿ. ಟಿ. ಗಳ ಅಗತ್ಯತೆ

೯೩೩. (೨೮೪೪) ಶ್ರೀ ಎನ್. ಹೆಚ್. ಗೌಡ (ಕುಮಟಾ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಉತ್ತರ ಕನ್ನಡ ಜಿಲ್ಲೆಯ ಗಂಗಾವಳಿ ಮತ್ತು ಅಘನಾಶಿನಿ ನದಿಗಳನ್ನು ದಾಟಲು ಎಲ್. ಸಿ. ಟಿ. ಎಂಬ ಸಣ್ಣ ಬಾರ್ಜುಗಳ ಅಗತ್ಯತೆಯು ಅರಿವು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಮೇಲೆ ಹೇಳಿದ ನದಿಗಳಿಗೆ ಎಲ್. ಸಿ. ಟಿ. ಗಳನ್ನು ಪೂರೈಸಲು ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಹೌದು.

ಆ) ಈ ಯೋಜನೆಗಳನ್ನು ಮಂಜೂರು ಮಾಡಿ ಕಾರ್ಯಗತಗೊಳಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿ ಇದೆ.

ಅಧ್ಯಕ್ಷರೇ, ಇದರ ಬಗ್ಗೆ ಸಪ್ಲಿಮೆಂಟರಿ ನೋಡಿದರೆ ಬಹುಶಃ ಮಾನ್ಯ ಸದಸ್ಯರಿಗೆ ಅರ್ಥವಾಗ ಬಹುದು ಎಂದು ಹೇಳುತ್ತಿದ್ದೇನೆ.

> '' ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನಲ್ಲಿ ಗಂಗಾವಳಿ ನದಿಯ ಅಡ್ಡಲಾಗಿ '' ಗಂಗಾವಳಿ–ಮಂಜುಗಣಿ '' ನಡುವೆ ಹಾಗೂ ಅಘನಾಶಿನಿ ನದಿಯ ಅಡ್ಡಲಾಗಿ '' ತದಡಿ–ಅಘನಾಶಿನಿ '' ನಡುವೆ ಪ್ರಯಾಣಿಕರನ್ನು ಒಯ್ಯುವ ಸಲುವಾಗಿ ಮಿನಿ ಎಲ್. ಸಿ. ಟಿ. ಗಳನ್ನು ಕಡವು ಸೇವೆಯಲ್ಲಿ ತೊಡಗಿಸುವ ಪ್ರಸ್ತಾಪವು ಸರ್ಕಾರದ ಪರಿಶೀಲನೆ ಯಲ್ಲಿರುವುದು.

೧.) '' ಗಂಗಾವಳಿ–ಮುಂಜುಗಣಿ ''ನಡುವೆ ಕಡವು ಸೇತುವೆಯಲ್ಲಿ ತೊಡಗಿಸಲು ಸುಮಾರು ರೂ. ೧೩.೦೦ ಲಕ್ಷ ವೆಚ್ಚದಲ್ಲಿ ಒಂದು ಮಿನಿ ಎಲ್. ಪಿ. ಟಿ. ಹಾಗೂ ಕಡವಿನ ಇಕ್ಕೆಡೆಗಳಲ್ಲಿ ಪ್ರಯಾಣಿಕರ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಯೋಜನೆಯನ್ನು ೧೯೮೯–೯೦ನೇ ಆಯವ್ಯಯದಲ್ಲಿ ಅಳವಡಿಸಲು ಉದ್ದೇಶಿಸಲಾಗಿದೆ. ಈತನ್ಮಧ್ಯೆ ಈ ಯೋಜನೆಯನ್ನು ಕಾರ್ಯಗತಗೊಳಿಸುವರೇ ಕೇಂದ್ರ ಸರ್ಕಾರದ ಆರ್ಥಿಕ ನೆರವನ್ನು ಪಡೆಯುವಂತಾಗಲು ಈ ಯೋಜನೆಯನ್ನು ಕೇಂದ್ರ ಪುರಸ್ಕೃತ ಯೋಜನೆ '' ಯಲ್ಲಿ ಸೇರಿಸಲು ಒಪ್ಪಿಗೆ ನೀಡುವಂತೆ ಕೇಂದ್ರ ಸರ್ಕಾರವನ್ನು ವಿನಂತಿಸಲು ಉದ್ದೇಶಿಸಿರುತ್ತದೆ.

೨)'' ತದಡಿ–ಅಘನಾಶಿನಿ '' ನಡುವೆ ಕಡವು ಸೇವೆಯಲ್ಲಿ ತೊಡಗಿಸಲು ಸುಮಾರು ರೂ. ೧೧.೯೦ ಲಕ್ಷ ವೆಚ್ಚದಲ್ಲಿ ಒಂದು ಮಿನಿ ಎಲ್. ಪಿ. ಟಿ. ಹಾಗೂ ಕಡವಿನ ಇಕ್ಕೆಡೆಗಳಲ್ಲಿ ಪ್ರಯಾಣಿಕ ಸೌಲಭ್ಯಗಳನ್ನು ಒದಗಿಸುವ ಯೋಜನೆಯನ್ನು ೧೯೮೮–೮೯ನೇ ಆಯವ್ಯಯದಲ್ಲಿ ಸೇರುವ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದ್ದು ಒಂದು ಪಕ್ಷ ಹೊಸ ಯೋಜನೆಯನ್ನು ೧೯೮೮–೮೯ನೇ ಆಯವ್ಯಯದಲ್ಲಿ ಸೇರಿಸುವ ಅವಕಾಶವಿಲ್ಲದೇ ಇದ್ದಲ್ಲಿ ಇದನ್ನು ೧೯೮೯–೯೦ನೇ ಆಯವ್ಯಯದಲ್ಲಿ ಸೇರಿಸಿ ಕಾರ್ಯಗತ ಮಾಡಲು ಉದ್ದೇಶಿಸಿದೆ.

ಶ್ರೀ ಎನ್. ಹೆಚ್. ಗೌಡ.—ಅಧ್ಯಕ್ಷರೇ, ಈ ವಿಷಯವಾಗಿ ನಾನು ಕಳೆದ ೧೯೮೫ನೇ ಇಸವಿಯಿಂದಲೂ ಸರ್ಕಾರಕ್ಕೆ ಒತ್ತಾಯಪಡಿಸುತ್ತಾ ಬಂದಿದ್ದೇನೆ. ನಿಜವಾಗಿಯೂ ಕೂಡ ಜನತೆಗೆ ಕೊಟ್ಟಂಥ ಆಶ್ವಾಸನೆ ಇಲ್ಲಿಯವರೆಗೆ ಈಡೇರದೇ ಇರುವುದರಿಂದ ಜನರು ಬಹಳ ಕುತೂಹಲದಿಂದ ಇದ್ದಾರೆ. ನಮ್ಮಲ್ಲಿ ಗಾಳಿ ಬೀಸುವಾಗ ನದಿ ದಾಟುವುದು ಅಂದರೆ ಸಾಮಾನ್ಯವಾಗಿ ಜನರು ಎಡಗೈನಲ್ಲಿ ಪ್ರಾಣ ಇಟ್ಟುಕೊಂಡು ನದಿ ದಾಟುವ ಪರಿಸ್ಥಿತಿ ಇದೆ. ಗಂಗಾವಳಿ ಮತ್ತು ಅಘನಾಶಿನಿ ನದಿಗಳಲ್ಲಿ ದೋಣಿ ಮೂಲಕ ದಾಟುವಾಗ ಕೆಲವು ಮಕ್ಕಳು ಸಾವಿಗೀಡಾಗಿ ಹೋದ ಸಂದರ್ಭ ಇದೆ. ನಾನು ಸಹ ಅದರ ಅನುಭವ ಪಡೆದಿದ್ದೇನೆ. ನಾನು ತಮ್ಮ ಮುಖಾಂತರ ವಿನಮ್ರವಾಗಿ ಮಾನ್ಯ ಮಂತ್ರಿಗಳಿಗೆ ವಿನಂತಿಸಿಕೊಳ್ಳುವುದೇನೆಂದರೆ, ಈ ಎರಡೂ ನದಿಗಳಿಗೆ ಆದಷ್ಟು ಶೀಘ್ರವಾಗಿ ಎಲ್. ಪಿ. ಟಿ. ಒದಗಿಸುವ ಆಶ್ವಾಸನೆಯನ್ನು ಕೊಡಬೇಕೆಂದು ವಿನಂತಿಸಿ ಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈ ಕೆಲಸವನ್ನು ತೆಗೆದುಕೊಳ್ಳುತ್ತದೆ.

ರಾಜ್ಯದಲ್ಲಿ ಒಡೆದುಹೋಗಿರುವ ಕೆರೆಗಳ ಬಗ್ಗೆ

೯೩೪. (೨೮೩೫) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕಳಪೆ ಕಾರ್ಯಗಳಿಂದ ರಾಜ್ಯದಲ್ಲಿ ಇತ್ತೀಚೆಗೆ ಒಡೆದು ಹೋಗಿರುವ ದೊಡ್ಡ ಮತ್ತು ಸಣ್ಣ ಕೆರೆಗಳ ಸಂಖ್ಯೆ ಎಷ್ಟು ?

ಆ) ಹಾನಿಗೊಳಗಾದ ಒಟ್ಟು ಮೊತ್ತ ಎಷ್ಟು ?

ಇ) ಹೈದರಾಬಾದ್, ಕರ್ನಾಟಕ ಜಿಲ್ಲೆಗಳಲ್ಲಿ, ಬೆಂಗಳೂರು, ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಹೆಚ್ಚಿನ ಮುಂಗಾರು ಮಳೆಯಿಂದಾಗಿ ಕೆರೆಗಳು ಒಡೆಯುವುದನ್ನು ತಡೆಯಲು ಸರ್ಕಾರ ಉದ್ದೇಶಿಸಿರುವ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡ ಮತ್ತು ನೀರಾವರಿ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಮುಂಗಾರಿಗೆ ಪೂರ್ವಭಾವಿಯಾಗಿ ಕೆರೆಗಳ ತನಿಖೆ ನಡೆಸಿ ನೂನ್ಯತೆಗಳಿದ್ದಲ್ಲಿ ಸರಿಪಡಿಸಲು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆಯಲ್ಲದೇ ಕೆರೆಗೆ ಬರುವ ನೀರಿನ ಬಗ್ಗೆ ಗಮನ ವಿಡಲು ಮತ್ತು ತುರ್ತುಪರಿಸ್ಥಿತಿಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲು ಕಾವಲನ್ನು ಏರ್ಪಡಿಸಲಾಗಿದೆ.

ಪ್ರಶ್ನೆ ೯೩೫ (೨೮೩೭)